# 14

# ಪವಿತ್ರಾತ್ಮನಿಂದಾಗುವ ನಡೆಸುವಿಕೆ

## (ಯೋಹಾನ 16)

*“ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು” (ವಚನಗಳು 12, 13).*

ಯೇಸು ತಾನು ಹೊರಟು ಹೋದ ಮೇಲೆ, ತಾನು ವಾಗ್ದಾನ ಮಾಡಿದ ಪವಿತ್ರಾತ್ಮನನ್ನು ಕಳುಹಿಸುವೆನೆಂದು ಹೇಳಿದನು. ಇದರಿಂದ ಅಪೊಸ್ತಲರು ವಿಶೇಷವಾದ ಭರವಸವನ್ನು ಹೊಂದಿದ್ದರು: “ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇವೆ. ಕೇಳಿರಿ, ನಾನು ಹೋಗುವದು ನಮಗೆ ಹಿತವಾಗಿದೆ: ಹೇಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ” (16:7). ಅದೇ ರೀತಿಯಲ್ಲಿ ಆತ್ಮನು, ದೈವೀಕ, ಸೇವಾ ಮರಣ ಹಾಗೂ ಪುನರುತ್ಥಾನಗಳ ಕುರಿತು ಲೋಕದಲ್ಲಿ ಅರುಹು ಹುಟ್ಟಿಸುವನು ಎಂದು ಹೇಳಿದನು (16:8-11). ಯೇಸು ವನ್ನು ಹಾಗೂ ಆತನ ಸಂದೇಶ ವನ್ನು ತಿರಸ್ಕರಿಸಿ ಆತನನ್ನು ಖಂಡಿಸಿದ ಪಾಪವನ್ನು ಆತ್ಮನು ಲೋಕಕ್ಕೆ ಮನನ ಮಾಡುವನು. ಆತನು ತಂದ ಸತ್ಯವನ್ನು ನಿರಾಕರಣೆ ಮಾಡಿದ ಲೋಕಕ್ಕೆ ಉಂಟಾಗುವ ನ್ಯಾಯ ತೀರ್ಪಿಕೆಯ ಅರುಹನ್ನು ಉಂಟುಮಾಡಿದನು.

ಯೇಸು ಈ ಚರ್ಚೆಯನ್ನು ಮುಂದುವರೆಸಿ, ತನ್ನ ಅಪೊಸ್ತಲರು ಆತನು ಅವರಿಗೆ ನೀಡಿದ ಕೆಲಸವನ್ನು ಪೂರೈಸುವ ರಾಯಭಾರಿಗಳಾಗಿದ್ದರು ಮತ್ತು ಆತ್ಮನು ಅವರನ್ನು ನಡಿಸುವನು ಅಂದನು. ಆತನು ಸಕಲವನ್ನು ಅವರಿಗೆ ಬಯಲು ಮಾಡದಿದ್ದರೂ, ಅವರನ್ನು ಸತ್ಯದ ಹಾದಿಯಲ್ಲಿ ನಡೆಸಿದ್ದನು. ಆತನ ಪುನರಾಗಮನದಲಿ, ಅಗತ್ಯವಿರುವ ಇತರೆ ಸತ್ಯಗಳನ್ನು ಪ್ರಕಟಿಸುತ್ತಿದ್ದನು. ಯೇಸುವಿನ ಮರಣ ಪುನರುತ್ಥಾನ, ಹಾಗೂ ಪಂಚಾಶತ್ತಮ ದಿನದ ನಂತರ, ಅವರು ಕರ್ತನಿಂದ ತಿಳಿಯಬೇಕಾಗಿದ್ದ ಪೂರ್ಣ ಪ್ರಕಟನೆಯನ್ನು ಅರಿಯುವವರಿದ್ದರು.

ಆತ್ಮನು ಬರುವಾಗ, ಅವರಲ್ಲಿ ಯಾವ ವಿಶೇಷವಾದ ಕಾರ್ಯವನ್ನು ಮಾಡಲಿದ್ದನು?

### ಸಕಲ ಸತ್ಯಕ್ಕೂ

ಪವಿತ್ರಾತ್ಮನು ಅವರನ್ನು “ಸಕಲ ಸತ್ಯಕ್ಕೆ” ನಡೆಸುತ್ತಿದ್ದನು, ಯೇಸು ಅವರಿಗೆ, “ಆದರೆ ಸತ್ಯದ ಆತ್ಮನು ಬರುವಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿ ಸತ್ಯಕ್ಕೆ ಸೇರಿಸುವನು.” ಗ್ರೀಕರ ಆತ್ಮ ಮತ್ತು ಯೇಸು ಇಬ್ಬರೂ ಸತ್ಯವನ್ನು ತಿಳಿಸುತ್ತಿದ್ದರು.

ಎರಡು ವಿಧವಾದ ಮಾರ್ಗದರ್ಶನವನ್ನು ಆತ್ಮನು ನೀಡುವದಕ್ಕಿದ್ದನು; ಆತನು ಹಿಂದಿನದನ್ನು ಹಾಗೂ ಮುಂದೆ ಆಗುವದನ್ನು ತೋರುವವನಿದ್ದನು. ಯೇಸು ಬೋಧಿಸಿದೆಲ್ಲವನ್ನು ಆತ್ಮನು ಅಪೊಸ್ತಲರಿಗೆ ನೆನಪು ಮಾಡುತ್ತಿದ್ದನು. ಯೇಸು ಅವರಿಗೆ ತಿಳಿಸಿದ್ದ ಯಾವುದೇ ವಿಷಯವನ್ನು ಅವರು ಕೈ ಬಿಡಬಾರದಿತ್ತು. ಅವರು ಯೇಸುವಿನಿಂದ ಕಲಿಯಲಾರದ ವಿಷಯಗಳನ್ನು ಆತನು ಅವರಿಗೆ ತಿಳಿಸಿದನು. ಯೇಸು ಅವರಿಗೆ ಮಾಹಿತಿಯನ್ನು ನೀಡಿ, “ನನ್ನ ಹೆಸರಿನಲ್ಲಿ

ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು'' (14:26).

ಈ ಮಾತುಗಳು ಅಪೊಸ್ತಲರಿಗೆ ಎಷ್ಟೋ ಮಹತ್ತರವಾಗಿತ್ತಲ್ಲವೇ? ಅದು ಅಪೊಸ್ತಲರು ಹೊಂದಿದ್ದ ಅಧಿಕಾರಕ್ಕೆ ಸೂಚನೆಯಾಗಿತ್ತು. ಅವರು ಆತನ ಸಂದೇಶದ ಸಂದೇಶಕರಾಗಿದ್ದರು. ಅಪೊಸ್ತಲರು ಬೋಧಿಸಿ ಪ್ರಸಂಗಿಸಬೇಕಾಗಿದ್ದ ಅಂಶಗಳನ್ನು ತಿಳಿಸುತ್ತವೆ. ಅವರು ಸಕಲ ಸತ್ಯಕ್ಕೆ ನಡೆಸಲ್ಪಡುತ್ತಿದ್ದರು (ಒತ್ತಿ ಹೇಳಿದ್ದು ನನ್ನದು). ಅದು ನಿತ್ಯವಾದ ಸತ್ಯವಾಗಿತ್ತು. ಮೊದಲ ಹಾಗೂ ಮುಂದಿನ ಎಲ್ಲಾ ಶತಮಾನಗಳ ಸಭೆಗಳಿಗೆ ಅಗತ್ಯವಿರುವ ಸತ್ಯವು ಪ್ರಕಟವಾಗುತ್ತಿತ್ತು. ಆ ನಂಬಿಕೆಗಾಗಿ ಹಾತೊರೆಯಿರಿ ಎಂದು ಯೂದನು ಬೇಡಿಕೊಂಡನು: ಅದನ್ನು ಅವನು "ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ'' ಅಂದನು (ಯೂದ 3).

## ದೇವರ ಚಿತ್ತಾನುಸಾರ

ಪವಿತ್ರಾತ್ಮನು ತನ್ನದೇ ಆದ ಸಿದ್ಧಾಂತವನ್ನು ಹೊಂದಿರಲಿಲ್ಲ. ಆದರೆ ದೇವರ ಚಿತ್ತಾನುಸಾರ ಮಾತನಾಡುತ್ತಿದ್ದನು. ಆದ್ದರಿಂದ ಯೇಸು, "ಆತನು ತನ್ನ ಮಾತನ್ನು ಹೇಳದೆ, ತಾನು ಕೇಳಿದ್ದನ್ನೇ ಮಾತನಾಡುವನು.'' ಆತ್ಮನು ತನ್ನನ್ನು ಮಹಿಮೆ ಪಡಿಸಿಕೊಳ್ಳದೆ, ತನ್ನದನ್ನೇನೂ ಹೇಳದೆ ಅಥವಾ ತನ್ನ ಯೋಜನೆಯನ್ನು ಪ್ರಚುರಪಡಿಸದೇ, ತಂದೆಯು ತಿಳಿಸಿದ್ದನ್ನೇ ಹೇಳುವನು, ಆದ್ದರಿಂದ ಯೇಸು ಹೇಳಿದ್ದೇನೆಂದರೆ, ನನ್ನಷ್ಟಕ್ಕೆ ನಾನೇ ಏನೂ ಮಾತನಾಡಲಾರೆನು; ತಂದೆ ಹೇಳಿದ್ದನ್ನು ಕೇಳಿ ನ್ಯಾಯ ತೀರಿಸುತ್ತೇನೆ; ಮತ್ತು ಸ್ವಂತ ಚಿತ್ತವನ್ನು ನೆರವೇರಿಸಬೇಕೆಂದು ಅಪೇಕ್ಷಿಸದೆ ನನ್ನನ್ನು ಕಳುಹಿಸಿದಾತನ ಚಿತ್ತ ನೆರವೇರಬೇಕೆಂದು ಅಪೇಕ್ಷಿಸುವದರಿಂದ ನಾನು ಮಾಡುವ ತೀರ್ಪು ನ್ಯಾಯವಾಗಿದೆ (5:30). ಯೇಸುವಿನ ಸೇವೆಯವನ್ನು, ತಂದೆಯ ಚಿತ್ತವನ್ನು ಮುಂದುವರೆಸುವದೇ ಆತ್ಮನ ಕಾರ್ಯವಾಗಿತ್ತು.

ಆತ್ಮನು ತನ್ನದೇ ಆದ ಬೋಧನೆಯನ್ನು ನಿರೂಪಿಸುವದಿಲ್ಲ. ಅಪೊಸ್ತಲರು ಬಲಹೀನರಾಗಿದ್ದರಿಂದ, ಯೇಸುವಿಗಿಂತಲೂ ಹೆಚ್ಚಾದ ಸತ್ಯವನ್ನು ಅವರಿಗೆ ಪ್ರಭೋಧಿಸುತ್ತಿದ್ದನು. ಯೇಸು ಅವರೊಂದಿಗೆ ಮಾತನಾಡುವಾಗ, ಆ ಪೂರ್ಣವಾದ ಸತ್ಯಗಳನ್ನು ಅರಗಿಸಿಕೊಳ್ಳಲು ಅಸಮರ್ಥರಾಗಿದ್ದರು. ಆತ್ಮ ಹಾಗೂ ಯೇಸು ಇಬ್ಬರೂ ಸೇರಿ ಆ ಸತ್ಯವನ್ನು ಲೋಕಕ್ಕೆ ತಂದರು; ಹಾಗೂ ಆತ್ಮನು ಯೇಸುವನ್ನು ಅನುಸರಿಸಿದನು, ಸತ್ಯವನ್ನು ಪೂರ್ಣವಾಗಿ ಪ್ರಕಟಿಸಿದನು ಆತ್ಮನು ಸಭೆಯೊಂದಿಗೆ ನೆಲೆಗೊಂಡು, ಸತ್ಯವನ್ನು ಲೋಕದಲ್ಲಿ ಕಾಪಾಡಿದನು.

## ದೇವರ ನಿತ್ಯವಾದ ಉದ್ದೇಶವನ್ನು ಮುಂದುವರೆಸಿದನು

ಮುಂದೆ ಸಂಭವಿಸುವಂಥ ಸಂಗತಿಗಳನ್ನು ಪವಿತ್ರಾತ್ಮನು ಅಪೊಸ್ತಲರಿಗೆ ತಿಳಿಸುತ್ತಿದ್ದನು. ಇದರ ಕುರಿತು ಯೇಸು, "ಆತನು ದೇವರ ನಿತ್ಯವಾದ ಕಾರ್ಯಗಳನ್ನು ಬಯಲು ಪಡಿಸುತ್ತಿದ್ದನು.'' ಪೂರ್ವಿಕರ ಹಾಗೂ ಮೋಶೆಯ ಕಾಲದಿಂದ ದೇವರು ತನ್ನ ಯೋಜನೆಗಳನ್ನು ಕಾರ್ಯ ರೂಪಕ್ಕೆ ತಂದನು. ಕಾಲವು ಪರಿಪೂರ್ಣವಾದಾಗ (ಗಲಾತ್ಯ 4:4). ಮೆಸ್ಸೀಯ ಸಕಲ ಪಾಪಕ್ಕಾಗಿ, ಸಕಲ ಸಮಯಕ್ಕಾಗಿ, ಸಕಲ ಜನರಿಗಾಗಿ ಮಹತ್ವದ ಯಜ್ಞವನ್ನು ಸಮರ್ಪಿಸಿದನು. ಆದ್ದರಿಂದ ದೇವರು ಅಂತಿಮವಾಗಿ, "ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ'' ಅಂದನು (ಯೆರೆಮಿಾಯ 31:34). ಹಳೆಯ ಒಡಂಬಡಿಕೆಯ ಪ್ರತಿಯೊಂದು ಯಜ್ಞವು ಯೇಸುವಿನಲ್ಲಿ ನೆರವೇರಿದವು. ದೇವರ ಮಗನ ಕೆಲಸವನ್ನು ದೇವರು ಮಗನಿಗೆ ನೇಮಿಸಿದ ಯೋಜನೆಯನ್ನು ಕ್ರೈಸ್ತರ ಯುಗದಲ್ಲಿ ಮುಂದುವರೆಸುವ ಸಲುವಾಗಿ ಆತ್ಮನು ಬಂದನು.

## ಮುಕ್ತಾಯ

ಪವಿತ್ರಾತ್ಮನು ಲೋಕದ ಮುಂದೆ, ಸಭೆಯ ಕೈಗಳಲ್ಲಿ ಸತ್ಯವನ್ನು ಇರಿಸಿದ್ದನು, ಹಾಗೂ ಸಭೆಗೆ ಮಾರ್ಗದರ್ಶನ ನೀಡಿದನು. ಹಾಗೂ ಸಭೆಗಿರುವ ಭರವಸವನ್ನು ಆತನು ತೋರಿದನು. ದೇವರ ವಾಕ್ಯವೆಂಬ ನೀರಿನಿಂದ ಸಭೆಯು ಸ್ವಚ್ಛವಾಗಿದೆ, ಹಾಗೂ ಸತ್ಯದಿಂದ ಪವಿತ್ರವಾಗಿದೆ ಇಂಥಾ ಒಂದು ಪರಿಶುದ್ಧವಾದ ಸಭೆಯನ್ನು ಕ್ರಿಸ್ತನು ಪ್ರತಿನಿಧಿಸಿ ಅಂತ್ಯದಲ್ಲಿ ಮಹಿಮೆಪಡಿಸುವನು. ಈ ವಾಕ್ಯದ ನಿಮಿತ್ತವಾಗಿ ಸಭೆಯು ಕ್ರಿಸ್ತನನ್ನೇ ಎದುರುಗೊಳ್ಳುವದಕ್ಕೆ ಸಜ್ಜಾಗುತ್ತದೆ. ಆಗ ಸಭೆಯು ಯಾವುದೇ ವಿಧವಾದ ಸುಕ್ಕು ಹಾಗೂ ಕಳಂಕವನ್ನು ಹೊಂದಿರುವದಿಲ್ಲ; ಆತನು ಆಕೆಯನ್ನು ಸ್ವೀಕರಿಸಲು ಬರುವಾಗ, ಆಕೆಯ ಪರಿಶುದ್ಧಳು ಹಾಗೂ ನಿಷ್ಕಳಂಕಳು ಆಗಿರಬೇಕು (ಎಫೆಸ 5:26, 27).

ಯೇಸುವಿನ ಮಾತುಗಳಿಂದ ಅಪೊಸ್ತಲರಿಗೆ ಪ್ರೋತ್ಸಾಹ ಉಂಟಾಯಿತಲ್ಲವೇ! ಆತನ ಪ್ರಕಟನೆಯಿಂದ, ಅವರು ಒಂಟಿಗರಲ್ಲ ಎಂದು ತಿಳಿದರು. ಅವರನ್ನು ಸತ್ಯದಲ್ಲಿ ನಡೆಸಿ, ದೇವರ ಸಂದೇಶವನ್ನು ಅಪೊಸ್ತಲರಿಗೆ ಪ್ರಕಟಮಾಡಲು ಆತ್ಮನು ಬಂದನು. ಅವರ ಭವಿಷ್ಯತ್ತನ್ನು ನೋಡುವಂತೆ, ಯೇಸು ಅವರ ಕಣ್ಣುಗಳನ್ನು ತೆರೆದನು. ಪವಿತ್ರಾತ್ಮನು ಬಂದದ್ದಕ್ಕಾಗಿ ದೇವರಿಗೆ ಸ್ತೋತ್ರ ಮಾಡೋಣ.

---

*"ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಘಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗಮಾಡಿದನು - ಯೆಹೂದ್ಯರೇ, ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಜನರೇ, ಈ ಸಂಗತಿಯು ಏನೆಂದು ನಿಮಗೆ ಗೊತ್ತಾಗುವ ಹಾಗೆ ನನ್ನ ಮಾತಿಗೆ ಕಿವಿಗೊಡಿರಿ; ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ; ಈಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿದೆಯಷ್ಟೆ. ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ" (ಅಪೊಸ್ತಲರ ಕೃತ್ಯಗಳು 2:14-16).*

*"ತರುವಾಯ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು, ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವು" (ಯೋವೇಲ 2:28).*